# ಮೆ॥ ಎನ್.ಎಸ್.ಎಲ್. ಶುಗರ್ಸ್, ಲಿ., ಆಳಂದ

(ಲೆಸ್ಸಿ ಆಫ್ ಎಸ್.ಎಸ್.ಕೆ.ಎನ್. ಆಳಂದ)

## ಕಬ್ಬನ್ನು ಮಾರಾಟ ಮಾಡಲು ಮತ್ತು ಕೊಳ್ಳಲು ಒಡಂಬಡಿಸಿದ ಪತ್ರ

ರೈತರ ಸಂಖ್ಯೆ ........................................................ ನೆಟ್ಟ ಸಾಲು........................................................

ವಿಭಾಗ........................................................ ಅರೆಯುವ ಸಾಲು........................................................

ಕ್ಷೇತ್ರ........................................................ ಪ್ಲಾಂಟಿಂಗ್ ಕೊಡ್ ನಂ........................................................

## ಕಬ್ಬು ಕರಾರಿನ ಶೆಡ್ಯೂಲ್

| ತಾಲೂಕು/ ಹೊಬಳಿ ಮತ್ತು ಮತ್ತು ಕೋಡು ಕೋಡು | ಬೆಳೆಯಿರುವ ಗ್ರಾಮ ಮತ್ತು ಕೋಡು | ಸರ್ವೆ ನಂಬರ್ | ಅಚ್ಚು ಕಟ್ಟು | ತಳಿ | ನೊಂದಣೆಯಾಗಿರುವ ವಿಸ್ತೀರ್ಣ(ಎಕರೆವಾರು) | | ಕಬ್ಬು ನೆಟ್ಟ/ ಕೂಳೆ ಬಿಟ್ಟ ದಿನಾಂಕ | ಒಪ್ಪಂದವಾದ ಕಬ್ಬಿನ ಪ್ರಮಾಣ (ಟನ್‌ಗಳಲ್ಲಿ) | ಪ್ಲಾಟ್ ನಂಬರ್ |
|---|---|---|---|---|---|---|---|---|---|
| | | | | | ತನು | ಕೂಳೆ | | | |
| | | | | | | | | | |

## ಕಬ್ಬನ್ನು ಮಾರಾಟ ಮತ್ತು ಕೊಳ್ಳುವ ಒಪ್ಪಂದ

(ಈ ಒಡಂಬಡಿಕೆಯು ಶುಗರ್‌ಕೇನ್ (ಕಂಟ್ರೋಲ್) ಆರ್ಡರ್ 1966 ಮತ್ತು ಇದಕ್ಕೆ ಸಂಬಂಧಪಟ್ಟ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಕಾಯಿದೆ, ಕಾನೂನು, ಪ್ರಕಟಣೆ ಮತ್ತು ತಿದ್ದುಪಡಿಗಳಿಗೆ ಒಳಪಟ್ಟಿರುತ್ತದೆ.)

ಸನ್ ಎರಡು ಸಾವಿರದ ........................................ಇಸವಿ........................................ಮಾಹೆ........................................ದಿನಾಂಕದಲ್ಲಿ. ಕರ್ನಾಟಕ ರಾಜ್ಯದ ಗುಲಬರ್ಗಾ ಜಿಲ್ಲೆ, ಆಳಂದ ತಾಲ್ಲೂಕು, ಭೂಸನೂರ ಗ್ರಾಮದಲ್ಲಿರುವ ಮೇ॥ ಎನ್.ಎಸ್.ಎಲ್. ಶುಗರ್ಸ್ ಲಿಮಿಟೆಡ್, ಆಳಂದ ಯುನಿಟ್ ೨ ಆಳಂದ ಇವರಿಗೂ (ಇನ್ನು ಮುಂದೆ "ಸಕ್ಕರೆ ಕಾರ್ಖಾನೆ" ಎಂದು ಕರೆಯಲ್ಪಡುವುದು) ಮತ್ತು ಕರ್ನಾಟಕ ರಾಜ್ಯ........................................ ಜಿಲ್ಲೆ........................................ತಾಲೂಕು........................................ಹೊಬಳಿ........................................ಗ್ರಾಮದ ಶ್ರೀಮತಿ/ಶ್ರೀ........................................ತಂದೆ/ತಾಯಿ/ಗಂಡ........................................ ಆದ........................................ವಯಸ್ಸಿನ ನನಗೂ/ನಮಗೂ(ಇನ್ನು ಮುಂದೆ "ಬೇಸಾಯಗಾರ" ಎಂದು ಕರೆಯಲ್ಪಡುವರು)

ಈ ಕೆಳಕಂಡ ಷರತ್ತುಗಳಿಗೆ ಅನುಸಾರವಾಗಿ ಒಪ್ಪಿಗೆಯಾದ ಕರಾರು ಪತ್ರವು ಈ ರೀತಿ ಇರುತ್ತದೆ.

1. ಬೇಸಾಯಗಾರನು ಅವನೇ ಈ ಷೆಡ್ಯೂಲನಲ್ಲಿ ತೋರಿಸಿರುವ ಜಮೀನಿಗೆ ಪೂರ್ಣ ಮಾಲೀಕ/ಗುತ್ತೀಗೆದಾರ ಆಗಿರುತ್ತಾನೆ ಎಂದು ಸದರಿ ಜಮೀನು ಕಬ್ಬಿನ ವ್ಯವಸಾಯಕ್ಕೆ ಯೋಗ್ಯವಾಗಿರುತ್ತದೆಂದು ಮತ್ತು ಈ ಒಡಬಂಡಿಕೆಗೆ ಒಪ್ಪಿ ಸಹಿ ಹಾಕಲು ಅರ್ಹತೆ ಇರುತ್ತದೆಂದು ಈ ಸಕ್ಕರೆ ಕಾರ್ಖಾನೆಗೆ ಅಭಯ ಕೊಟ್ಟಿರುತ್ತೇನೆ.

2. ಬೇಸಾಯಗಾರನು ಷೆಡ್ಯೂಲ್‌ನಲ್ಲಿ ಕಾಣಿಸಿರುವ ಜಮೀನಿನಲ್ಲಿ ಕಬ್ಬನ್ನು ಬೆಳೆಯಲು ಮತ್ತು ಬೆಳೆದು ಪೂರ್ಣ ಕಬ್ಬನ್ನು ಈ ಸಕ್ಕರೆ ಕಾರ್ಖಾನೆಗೆ ಮಾರಲು ಒಪ್ಪಿಕೊಂಡಿರುತ್ತಾನೆ ಮತ್ತು ಈ ಕಾರ್ಖಾನೆಯು ಸಹ ಸದರಿ ಬೇಸಾಯಗಾರನಿಂದ ಸದರಿ ಕಬ್ಬನ್ನು ಖರೀದಿಸಲು ಒಪ್ಪಿಕೊಂಡಿರುತ್ತದೆ. ಬೇಸಾಯಗಾರ ಸದರಿ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಹಾಗೂ ಬೆಳೆದಿರುವ ಕಬ್ಬನ್ನು ಬಿಟ್ಟು ಬೇರೆ ತಾಕಿನಲ್ಲಿ ಬೆಳೆದ ಕಬ್ಬನ್ನು ಪ್ರತಿಯಾಗಿ ಸಕ್ಕರೆ ಕಾರ್ಖಾನೆಗೆ ಮಾರದಿರಲು ಒಪ್ಪಿರುತ್ತಾನೆ.

3. ಬೇಸಾಯಗಾರನು ಸದರಿ ಕಬ್ಬಿನ ವ್ಯವಸಾಯಕ್ಕಾಗಿ ಬೇಕಾಗುವ ಹಾಗೂ ಬೆಳೆಸುವ ಕಬ್ಬಿಗೆ ಬಿತ್ತನೆ ಗೊಬ್ಬರ ಹಾಗೂ ಸದರಿ ಕಬ್ಬಿನ ಬೇಸಾಯಕ್ಕೆ ತಗಲುವ ಖರ್ಚು ವೆಚ್ಚವನ್ನು ಬ್ಯಾಂಕ್ / ಸಹಕಾರಿ ಸಂಘಗಳಿಂದ ಸಾಲ ತೆಗೆದುಕೊಳ್ಳಲು ಸಕ್ಕರೆ ಕಾರ್ಖಾನೆಯು ಸದರಿ ಬೇಸಾಯಗಾರನಿಗೆ ಅರ್ಹತೆ ಇದ್ದಲ್ಲಿ ಟೈಯಪ್ ಅರೇಂಜ್‌ಮೆಂಟ್ (Tie-Up Arrangement) ರೀತಿಯಲ್ಲಿ ಸಹಾಯ ಮಾಡುತ್ತದೆ.

4. ಬೇಸಾಯಗಾರನು ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡುವ ಕಬ್ಬಿಗೆ ಟನ್ನು ಒಂದಕ್ಕೆ ಕೇಂದ್ರ ಸರ್ಕಾರ ನಿಗದಿ ಮಾಡಬಹುದಾದ ಧಾರಣೆಯಂತೆ ಬೆಲೆಯನ್ನು ಪಡೆಯಲು ಒಪ್ಪಿರುತ್ತಾನೆ.

5. ಬೇಸಾಯಗಾರನು ಷೆಡ್ಯೂಲ್‌ನಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಮಾಡಿದ ಸರಬರಾಜಿನಿಂದ ಬರುವ ಹಣದಲ್ಲಿ ಬ್ಯಾಂಕ್ ಅಥವಾ ಸಹಕಾರ ಸಂಘಗಳಲ್ಲಿ ಮಾಡಿರುವ ಸಾಲಕ್ಕೆ ಉತ್ತಾರ ಹಾಕಿಕೊಳ್ಳಲು ಮತ್ತು ಆ ಹಣವನ್ನು (ಸಾಲದ ಹಣ) ಸದರಿ ಬ್ಯಾಂಕ್ / ಸಹಕಾರ ಸಂಘದಲ್ಲಿರುವ ಬೇಸಾಯಗಾರನ ಖಾತೆಗೆ ಬಡ್ಡಿ ಸಮೇತ ಅಸಲನ್ನು ತುಂಬಲು ಒಪ್ಪಿರುತ್ತಾನೆ.

6. ಬೇಸಾಯಗಾರನು ಏನಾದರೂ ಸಕ್ಕರೆ ಕಾರ್ಖಾನೆಯಿಂದ ಬೆಳೆ ಸಾಲವನ್ನಾಗಲೀ ಅಥವಾ ಬೇರೆ ಯಾವುದೇ ರೀತಿಯ ಸಾಲವನ್ನು ತೆಗೆದುಕೊಂಡಿದ್ದಲ್ಲಿ ಸದರಿ ಬೇಸಾಯಗಾರನು ಸಕ್ಕರೆ ಕಾರ್ಖಾನೆಯ ಸಾಲದ ಮೊತ್ತವನ್ನು ಬಡ್ಡಿ ಸಾಲಿಯಾನ ಶೇಕಡಾ....................................ರಂತೆ ಸೇರಿಸಿ ಬ್ಯಾಂಕ್/ ಸಹಕಾರ ಸಂಘಗಳಿಂದ ಬೇಸಾಯಗಾರನು ಸಾಲ ತೆಗೆದುಕೊಂಡ ಹಣದಿಂದಾಗಲೀ ತಾನು ಕೊಟ್ಟಿರುವ ಸಾಲದ ಹಣವನ್ನು ವಸೂಲಿ ಮಾಡಿಕೊಳ್ಳಲು ಬೇಸಾಯಗಾರನು ಒಪ್ಪಿರುತ್ತಾನೆ.

7. ಬೇಸಾಯಗಾರನು ಒಂದು ವೇಳೆ ಸಕ್ಕರೆ ಕಾರ್ಖಾನೆಯ ಜೊತೆ ಒಪ್ಪಂದ ಮಾಡಿಕೊಂಡ ಪ್ರಮಾಣದಷ್ಟು ಕಬ್ಬನು ಸರಬರಾಜು ಮಾಡಲು ಆಗದಿದ್ದರೆ ಅಥವಾ ಮಾಡದಿದ್ದರೆ ಅಥವಾ ಸಕ್ಕರೆ ಕಾರ್ಖಾನೆಯಿಂದಾಗಲೀ ಅಥವಾ ಬ್ಯಾಂಕ್ / ಸಹಕಾರ ಸಂಘಗಳಿಂದ ತೆಗೆದುಕೊಂಡ ಸಾಲವನ್ನು ಹಿಂದಿರುಗಿಸಲು ವಿಫಲನಾದಲ್ಲಿ ಸಕ್ಕರೆ ಕಾರ್ಖಾನೆ ಅಥವಾ ಬ್ಯಾಂಕ್ ಅಥವಾ ಸಹಕಾರ ಸಂಘಗಳಿಂದ ಸದರಿ ಬೇಸಾಯಗಾರನ ಮೇಲೆ ವಯಕ್ತಿಕವಾಗಿಯೂ ಮತ್ತು ಅವರ ಸ್ಥಿರ ಚರ ಸ್ವತ್ತಿನ ಮೇಲಾಗಲೀ ಕಾನೂನು ಪ್ರಕಾರ ಕ್ರಮ ಜರುಗಿಸಿ ಸದರಿ ಸಾಲದ ಹಣವನ್ನು ಬಡ್ಡಿ ಸಮೇತ ಸಕ್ಕರೆ ಕಾರ್ಖಾನೆಯು ವಸೂಲಿ ಮಾಡಿಕೊಳ್ಳಲು ಬೇಸಾಯಗಾರನು ಒಪ್ಪಿರುತ್ತಾನೆ. ಸದರಿ ಬೇಸಾಯಗಾರನು ಈ ಸಂದರ್ಭದಲ್ಲಿ ಬರುವ ತಂಟೆ ತಕರಾರನ್ನು ಆಳಂದ ಸಿವಿಲ್ ನ್ಯಾಯಾಲಯದ ಪರಿಧಿಯೊಳಗೆ(ಸರಹದ್ದು) ಪರಿಹರಿಸಿಕೊಳ್ಳಲು ಒಪ್ಪಿರುತ್ತಾನೆ.

8. ಬೇಸಾಯಗಾರನು ಷೆಡ್ಯೂಲ್ ಒಪ್ಪಂದದಂತೆ ಕಡಿಮೆ ಪ್ರಮಾಣದಲ್ಲಿ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಿದ್ದಲ್ಲಿ ಅಥವಾ ಷೆಡ್ಯೂಲ್‌ನಲ್ಲಿ ಬೆಳೆದ ಕಬ್ಬನ್ನು ಕಾರ್ಖಾನೆಗೆ ಸರಬರಾಜು ಮಾಡದಿದ್ದಲ್ಲಿ ಅಥವಾ ಬೇರೆ ಕಡೆ ವರ್ಗಾಯಿಸಿದ್ದಲ್ಲಿ ಎಕರೆಗೆ 1,200-00(ಒಂದು ಸಾವಿರದ ಇನ್ನೂರು)ನಂತೆ ಅಥವಾ ಸರಬರಾಜು ಪ್ರಮಾಣದಲ್ಲಿ ಎಷ್ಟು ಕೊರತೆಯಾಗಿರುತ್ತದೆಯೋ ಅಷ್ಟು ಕೊರತೆಗೆ ಒಂದು ಮೆಟ್ರಿಕ್ ಟನ್‌ಗೆ ರೂ. 30(ಮೂವತ್ತು)ನಂತೆ ದಂಡವನ್ನು ಕೊಡಲು ಬೇಸಾಯಗಾರನು ಒಪ್ಪಿಕೊಂಡಿರುತ್ತಾನೆ. ಹಾಗೂ ಈ ದಂಡದ ಹಣವನ್ನು ಸಕ್ಕರೆ ಕಾರ್ಖಾನೆಯವರು ಬೇಸಾಯಗಾರನಿಗೆ ಕೊಡಬೇಕಾದ ಕಬ್ಬಿನ ಸರಬರಾಜು ಹಣದಲ್ಲಿ ಸಕ್ಕರೆ ಕಾರ್ಖಾನೆಯವರು ಉತ್ತಾರ ಹಾಕಿಕೊಳ್ಳಲು ಅರ್ಹರಾಗಿರುತ್ತಾರೆ ಎಂದು ಬೇಸಾಯಗಾರ ಒಪ್ಪಿಕೊಂಡಿರುತ್ತಾನೆ. ಈ ಮೊತ್ತದ ಕಬ್ಬು ಸದರಿ ಬೇಸಾಯಗಾನಿಂದ ಸರಬರಾಜು ಆಗದಿದ್ದಲ್ಲಿ ಅಥವಾ ಸರಬರಾಜಿನಲ್ಲಿ ಕೊರತೆಯಾದಲ್ಲಿ ಈ ಬಗ್ಗೆ ಸಕ್ಕರೆ ಕಾರ್ಖಾನೆಯಿಂದ ತಿಳುವಳಿಕೆ ನೀಡಿದ 30 ದಿನದೊಳಗಾಗಿ ಬೇಸಾಯಗಾರನು ಸದರಿ ಮೊತ್ತವನ್ನು ಪಾವತಿಸಲು ಒಪ್ಪಿರುತ್ತಾನೆ. ಹಾಗೂ ಬೇಸಾಯಗಾರನು ಷೆಡ್ಯೂಲ್ ಜಮೀನಿನಲ್ಲಿ ಕಾಣಿಸಿರುವ ಕಬ್ಬಿನ ಬೆಳೆಯನ್ನು ಸಕ್ಕರೆ ಕಾರ್ಖಾನೆಯ ಬ್ಯಾಂಕ್ ಸಹಕಾರ/ಸಂಘಗಳ ಯಾವುದೆ ಬಾಕಿಯ ಭದ್ರತೆಗಾಗಿ ಸಕ್ಕರೆ ಕಾರ್ಖಾನೆಯಲ್ಲಿ ಇಡಲು ಬೇಸಾಯಗಾರನು ಒಪ್ಪಿಕೊಂಡಿರುತ್ತಾನೆ.

9. ಸಕ್ಕರೆ ಕಾರ್ಖಾನೆಯು ಕಬ್ಬು ಅರೆಯುವ ಕಾಲಾವಧಿಗನುಗುಣವಾಗಿ ಹಾಗೂ ತನ್ನ ಅವಶ್ಯಕತೆಗೆ ತಕ್ಕಂತೆ ಬೇಸಾಯಗಾರನಿಂದ ಒದಗಿಸಲು ಒಪ್ಪಿರುವ ಪ್ರಮಾಣಕ್ಕಿಂತ ಹೆಚ್ಚಿಗೆಯಾದಲ್ಲಿ ಒಪ್ಪಿಗೆ ಪ್ರಮಾಣದ ಶೇ. 10. ರಷ್ಟು ಕಬ್ಬಿನ ಬೆಳೆಯನ್ನು ತೆಗೆದುಕೊಳ್ಳಲು ಕಾರ್ಖಾನೆಯು ಒಪ್ಪಿರುತ್ತದೆ.

10. ಸಕ್ಕರೆ ಕಾರ್ಖಾನೆಯವರು ಕರಾರು ಪತ್ರದಲ್ಲಿ ನಮೂದಿಸಿರುವ ಅವಧಿಯಲ್ಲಾಗಲೀ ಅಥವಾ ಕಬ್ಬನ್ನು ನೆಟ್ಟ ದಿನದಿಂದ /ಕೂಳೆ ಬಿಟ್ಟ ದಿನದಿಂದ 11ನೇ ತಿಂಗಳಿನಿಂದ 14ನೇ ತಿಂಗಳು ಅವಧಿ ಮುಗಿಯುವುದರೊಳಗಾಗಿ ಅವಧಿ ಕಾಲವು ಸಕ್ಕರೆ ಕಾರ್ಖಾನೆಯವರ ದೃಷ್ಠಿಯಲ್ಲಿ ಯಾವುದು ಉಚಿತವೋ ಅದಕ್ಕೆ ಅನುಸಾರವಾಗಿ ಸರಬರಾಜು ಆದೇಶವನ್ನು ಕೊಡತಕ್ಕದ್ದು ಆಯಾ ತಳಿಗಳ ಬೆಳವಣಿಗೆ ಪುಷ್ಟಿ ಮತ್ತು ಪಕ್ವ ಇವುಗಳನ್ನು ಅನುಸರಿಸಿ ಆದೇಶವನ್ನು ನೀಡಲಾಗುತ್ತದೆ. ಈ ಅವಧಿಯೊಳಗೆ ಸಕ್ಕರೆ ಕಾರ್ಖಾನೆಯು ಕಬ್ಬು ಕಟಾವು ಮಾಡಲು ಆದೇಶ ಕೊಡದಿದ್ದಲ್ಲಿ ಸದರಿ ಕಬ್ಬಿನ ಬೆಳೆಯನ್ನು ಪರಭಾರೆ ಮಾಡಲು ಬೆಳೆಗಾರ ಲಿಖಿತ ಮೂಲಕವಾಗಿ ಮುನ್ಸೂಚನೆಯನ್ನು ಕೊಡತಕ್ಕದ್ದು, ಸಕ್ಕರೆ ಕಾರ್ಖಾನೆಯವರು ಕಬ್ಬು ಕಟಾವಿನ ಆದೇಶವನ್ನು ಕೊಡಲು ವಿಫಲವಾದರೆ ಸಕ್ಕರೆ ಕಾರ್ಖಾನೆಯ ಅನುಮತಿ ಪಡೆದ ಮೇಲೆ ಸೂಕ್ತ ರೀತಿಯ ಪರಭಾರೆ ಕ್ರಮಗಳನ್ನು ಕೈಗೊಳ್ಳಲು ಅರ್ಹನಾಗಿರುತ್ತಾನೆ. ಈ ಬೆಳೆಗೆ ಸಕ್ಕರೆ ಕಾರ್ಖಾನೆಯವರಿಂದ ಅಥವಾ ಆರ್ಥಿಕ ಸಂಸ್ಥೆಗಳಿಂದ ಪಡೆದಿದ್ದ ವಿಶಿಷ್ಟ ಸಾಲವನ್ನು ಬಡ್ಡಿ ಮತ್ತು ಅಸಲು ಸಮೇತ ಹಿಂದಿರುಗಿಸಿ ಪರಭಾರೆ ಮಾಡಲು ಬೇಸಾಯಗಾರನು ಒಪ್ಪಿರುತ್ತಾನೆ.

11. ಬೇಸಾಯಗಾರನು ಷೆಡ್ಯೂಲ್ ಜಮೀನಿನಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಯ ಆವರಣಕ್ಕೆ ತಲುಪಿಸುವುದಲ್ಲದೆ, ಬೇಸಾಯಗಾರನು ತಾನು ಸರಬರಾಜು ಮಾಡಿರುವ ಕಬ್ಬನ್ನು ತೂಕ ಮಾಡುವಾಗ ತೂಕದ ಸೇತುವೆಯಲ್ಲಿ (Weigh Bridge) ತನ್ನ ಹಾಜರಿ ಅಥವಾ ಗೈರುಹಾಜರಿಯಲ್ಲಿ ರೆಕಾರ್ಡು ಆಗುವ ತೂಕವನ್ನು ಒಪ್ಪಿಕೊಳ್ಳುವುದಲ್ಲದೇ ಅದರಂತೆ ಕಬ್ಬಿನ ಬೆಲೆಯನ್ನು ಪಡೆಯಲು ಒಪ್ಪಿರುತ್ತಾನೆ.

12. ಬೇಸಾಯಗಾರನು ಸಕ್ಕರೆ ಕಾರ್ಖಾನೆಗೆ ಒದಗಿಸುವ ಕಬ್ಬಿನ ತೂಕದಲ್ಲಿ ಕಬ್ಬಿನ ಕಂತೆ ಕಟ್ಟುವುದಕ್ಕೆ ಉಪಯೋಗಿಸುವ ಸೋಗಿನ ಬಾಬ್ತು (Binding Materials) ಕೇಂದ್ರ ಸರ್ಕಾರದವರು ನಿಗಧಿ ಮಾಡಬಹುದಾದ ದರದಂತೆ ಕಟಾಯಿಸಿಕೊಡಲು ಒಪ್ಪಿರುತ್ತಾನೆ.

13. ಬೇಸಾಯಗಾರನು ಸಕ್ಕರೆ ಕಾರ್ಖಾನೆಯ ಲಿಖಿತ ಅಪ್ಪಣೆ / ಆದೇಶ (Cutting Order) ಅಥವಾ ಪರವಾನಿಗೆ ಇಲ್ಲದೆ, ಷೆಡ್ಯೂಲ್‌ನಲ್ಲಿ ಇರುವ ಕಬ್ಬಿನ ಬೆಳೆಯನ್ನು ಕಟಾವು ಮಾಡುವುದಿಲ್ಲವೆಂದು ಒಪ್ಪಿರುತ್ತಾನೆ.

14. ಬೇಸಾಯಗಾರನು ಒಪ್ಪಂದದ ಷೆಡ್ಯೂಲ್‌ನಲ್ಲಿ ಬೆಳೆದಿರುವ ಕಬ್ಬಿನಿಂದ ಬೆಲ್ಲವನ್ನಾಗಲೀ ಅಥವಾ ಬೆಲ್ಲದ ಪುಡಿಯನ್ನಾಗಲೀ ಮಾಡುವುದಿಲ್ಲವೆಂತಲೂ ಅಥವಾ ಸದರಿ ಕಬ್ಬಿನ ಬೆಳೆಯನ್ನು ಬೇರೆಯವರಿಗೆ ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಿಲ್ಲವೆಂದು ಒಪ್ಪಿರುತ್ತಾನೆ.

15. ಒಂದು ವೇಳೆ ಸಕ್ಕರೆ ಕಾರ್ಖಾನೆಯವರಿಂದ ಪರವಾನಿಗೆ ಬಂದ ಮೇಲೂ ಬೇಸಾಯಗಾರನು ಕಬ್ಬಿನ ಕಟಾವು ಮಾಡದಿದ್ದ ಪಕ್ಷದಲ್ಲಿ ಸಕ್ಕರೆ ಕಾರ್ಖಾನೆಯ ಸದರಿ ಕಬ್ಬಿನ ಬೆಳೆಯನ್ನು ತನ್ನ ಕೂಲಿಗಾರರಿಂದ ಕಟಾವು ಮಾಡಿಸಿ ಬೆಳೆಯನ್ನು ಸಕ್ಕರೆ ಕಾರ್ಖಾನೆಗೆ ತೆಗೆದುಕೊಂಡು ಹೋಗಿ ಉಪಯೋಗಿಸಬಹುದೆಂಬ ಮತ್ತು ಸದರಿ ಬೆಳೆಯಿಂದ ಬರತಕ್ಕ ಹಣದಿಂದ ಕಟಾವು ಮಾಡಿ ಸಾಗಿಸಲು ಆದ ವೆಚ್ಚವನ್ನು ಭರಿಸಲು ಮತ್ತು ಬೆಳೆ ಸಾಲವನ್ನು ಬಡ್ಡಿ ಸಮೇತವಾಗಿ ವಸೂಲು ಮಾಡಿಕೊಳ್ಳಲು ಸಕ್ಕರೆ ಕಾರ್ಖಾನೆಯವರಿಗೆ ಹಕ್ಕು ಇರುತ್ತದೆಂದು ಬೇಸಾಯಗಾರನು ಒಪ್ಪಿರುತ್ತಾನೆ.

16. ಬೇಸಾಯಗಾರನು ಸಕ್ಕರೆ ಕಾರ್ಖಾನೆಗೆ ರೋಗರಹಿತವಾದ ತೊಂಡೆ, ಬೇರು, ಜೊಂಡು ಮತ್ತು ಕೊಳೆಯಿಂದ ಚೊಕ್ಕಟವಾದ ಹದವಾಗಿರುವ ಒಳ್ಳೆಯ ಕಬ್ಬನ್ನು ಸರಬರಾಜು ಮಾಡಲು ಒಪ್ಪಿರುತ್ತಾನೆ. ಮತ್ತು ಸರಬರಾಜು ಮಾಡಿದ ಕಬ್ಬಿನಲ್ಲಿ ನ್ಯೂನತೆ ಇದ್ದಲ್ಲಿ ಸದರಿ ಕಬ್ಬನ್ನು ಸಾರಾಸಗಟಾಗಿ ನಿರಾಕರಿಸಲು ಸಕ್ಕರೆ ಕಾರ್ಖಾನೆಗೆ ಹಕ್ಕು ಇರುತ್ತದೆಂದು ಬೇಸಾಯಗಾರನು ಒಪ್ಪಿರುತ್ತಾನೆ.

17. ಸಕ್ಕರೆ ಕಾರ್ಖಾನೆಯ ನೌಕರ ವರ್ಗದವರು ಯಾವುದೇ ವೇಳೆಯಲ್ಲಿ ಒಪ್ಪಂದದ ಷೆಡ್ಯೂಲ್‌ನಲ್ಲಿ ಕಾಣಿಸಿರುವ ವಿಸ್ತೀರ್ಣವನ್ನು ಅಳೆಯುವುದಕ್ಕಾಗಲಿ ಅಥವಾ ಬೇರೆ ಇನ್ನಾವುದೇ ರೀತಿಯ ತನಿಖೆಗಾಗಲಿ ಬರಲು ಹಕ್ಕಿರುತ್ತದೆಂದು ಬೇಸಾಯಗಾರನು ಒಪ್ಪಿರುತ್ತಾನೆ.

18. ಬೇಸಾಯಗಾರನು ತಾನು ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸಾಗಿಸಲು ಸಕ್ಕರೆ ಕಾರ್ಖಾನೆಯೇ ವೆಚ್ಚ ಭರಿಸಿದ್ದಲ್ಲಿ ಆ ಸದರಿ ವೆಚ್ಚವನ್ನು ಕಬ್ಬಿನ ಬೆಳೆಯಿಂದ ಬಂದ ಹಣದಿಂದ ಮುರಿದುಕೊಂಡು ಮಿಕ್ಕ ಹಣವನ್ನು ಬೇಸಾಯಗಾರನಿಗೆ ಕೊಡಲು ಬೇಸಾಯಗಾರನು ಒಪ್ಪಿರುತ್ತಾನೆ.

19. ಒಂದು ವೇಳೆ ಆಕಸ್ಮಾತಾಗಿ ಕಬ್ಬಿಗೆ ಬೆಂಕಿ ಬಿದ್ದು ಸುಟ್ಟು ಹೋದರೆ ಅಂತಹ ಕಬ್ಬನ್ನು ಸಕ್ಕರೆ ಕಾರ್ಖಾನೆಯವರು ತೆಗೆದುಕೊಂಡು ಸರ್ಕಾರದವರು ನಿಷ್ಕರ್ಷೆಮಾಡುವ ದರದಂತೆ ಬೆಲೆಯನ್ನು ತೆಗೆದುಕೊಳ್ಳಲು ಬೇಸಾಯಗಾರ ಒಪ್ಪಿರುತ್ತಾನೆ.

20. ಮುಂದೆ ಬೇಸಾಯಗಾರನಿಂದ ಭೂಮಿಯ ಯಾವ ವಿಧವಾದ ಪರಭಾರೆ, ಆಧಾರ, ಭೋಗ್ಯ ಮುಂತಾದವುಗಳು ಆದರೂ ಸದರಿ ಪರಭಾರೆಗಳು ಈ ಒಪ್ಪಿಗೆಯಂತೆ ಸಕ್ಕರೆ ಕಾರ್ಖಾನೆಗೆ ಸದರಿ ಷೆಡ್ಯೂಲ್ ಜಮೀನಿನಲ್ಲಿ ಇರತಕ್ಕ ಹಕ್ಕು ಬಾಧ್ಯತೆಗಳನ್ನು ಬದ್ಧಪಡಿಸುವುದಿಲ್ಲ. ಈ ಒಪ್ಪಿಗೆ ಕರಾರುಗಳು ಮತ್ತು ನಿಬಂಧನೆಗಳು ಜಮೀನು ಪರಭಾರೆದಾರರನ್ನು ಸಹ ಒಪ್ಪಿಗೆದಾರರನ್ನು ಸಹ ಒಪ್ಪಿಗೆದಾರನ ಪ್ರಕಾರ ಬದ್ಧ ಪಡಿಸುತ್ತದೆ.

21. ಒಂದು ವೇಳೆ ಬೇಸಾಯಗಾರನು ಷೆಡ್ಯೂಲ್ ಜಮೀನಿನಿಂದ ಒಪ್ಪಂದ ಮಾಡಿಕೊಂಡ ಪ್ರಮಾಣವನ್ನು ಸರಬರಾಜು ಮಾಡದಿದ್ದಲ್ಲಿ ಬೇಸಾಯಗಾರನು ಪಡೆದ ಸಾಲವನ್ನು ಬಡ್ಡಿ ಸಮೇತ ವಜಾ ಮಾಡಲಿಕ್ಕಾಗಿ ಸಕ್ಕರೆ ಕಾರ್ಖಾನೆಯವರು ಬೇಸಾಯಗಾರನ ಕುಟುಂಬಕ್ಕೆ ಸೇರಿದ ಯಾವುದೇ ಸದಸ್ಯರ ಅನುಭವದಲ್ಲಿ ಬೆಳೆದ ಹದವಾಗಿರುವ ಕಬ್ಬಿಗೆ ಕಟಾವು ಮಾಡುವ ಆದೇಶ ಪತ್ರವನ್ನು ಕೊಟ್ಟು ಸಕ್ಕರೆ ಕಾರ್ಖಾನೆಯವರು ಕಬ್ಬನ್ನು ಕೊಳ್ಳಲು ಅರ್ಹರಾಗಿರುತ್ತಾರೆ. ಇದಕ್ಕೆ ಬೇಸಾಯಗಾರನೂ ಒಪ್ಪಿಕೊಂಡಿರುತ್ತಾನೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಓದಿಸಿ ಬೇಸಾಯಗಾರನು ಮತ್ತು ಸಕ್ಕರೆ ಕಾರ್ಖಾನೆಯವರು ಈ ಕರಾರಿಗೆ ರುಜು ಹಾಕಿರುತ್ತಾರೆ.

ಬರೆದವರು (ಬಿಕ್ಕಲಂ) ಓದಿಸಿ ಕೇಳಿ ಸಹಿ ಮಾಡಿರುತ್ತೇನೆ.

ಸಾಕ್ಷಿ ಸಹಿ ಅಥವಾ ಹೆ.ಗು. (ಬೆಳೆಗಾರ)

ಮೆ॥ ಎನ್.ಎಸ್.ಎಲ್. ಶುಗರ್ಸ್ ಲಿಮಿಟೆಡ್ ಪರವಾಗಿ,

Division Incharge Cane Manager ಡಿ. ಜಿ. ಎಂ . ಕೇನ್

# For Office use Only

Ryot No. :

Ryot's Name : Age :

Father's Name :

Residential Address :

Post :

Taluk :

Dist. :

Pin code :

Bank Name : Branch :

Bank Code :

S.B.A/C. No. :

Field Assistant Senior Clerk Division Incharge